೩

ಶಿಕ್ಷಕರಿಗಾಗಿ ಪಠ್ಯಗಳ ಆಯ್ಕೆ

– ನಮ್ರತಾ ಬಾತ್ರಾ

ಸಾರಾಂಶ: ಶಿಕ್ಷಕರೆಂದರೆ ಎಲ್ಲವನ್ನು ಬಲ್ಲವರಾಗಿರಬೇಕೆಂಬುದು ಸಾಮಾನ್ಯ ನಿರೀಕ್ಷೆ. ಆದರೆ ಶಿಕ್ಷಕ ಸಮುದಾಯಗಳೊಂದಿಗೆ ಕೆಲಸ ಮಾಡಿದವರಿಗೆ ಆಗುವ ಅನುಭವವೇ ಬೇರೆ. ಪರ್ಯಾಯ ಶಾಲೆಗಳ ಶಿಕ್ಷಕರು ಮೂಲತಃ ಸಮುದಾಯ ಅಭಿವೃದ್ಧಿ ಕಾರ್ಯಕರ್ತರು. ಇವರಿಗೆ ಕಲಿಯಲು ಅವಕಾಶವೂ ಕಡಮೆ, ಸಮಯವೂ ಕಡಮೆ. ಹಾಗಿದ್ದಲ್ಲಿ ಇವರ ಸಾಮರ್ಥ್ಯ ಹೆಚ್ಚಿಸಲು ಸಾಧ್ಯವಿಲ್ಲವೇ? ಶಿಕ್ಷಣ ಗುಣಮಟ್ಟದ ವಿಚಾರದಲ್ಲಿ ರಾಜಿ ಅನಿವಾರ್ಯವೇ? ಎಂದು ಚರ್ಚಿಸಬಹುದಾದ ಈ ಪ್ರಶ್ನೆಗಳಲ್ಲಿ ಎರಡನೇ ಪ್ರಶ್ನೆ ಇಲ್ಲಿ ಸೂಕ್ತ. ಈ ಪ್ರಶ್ನೆಗಳಿಗೆ ನಮ್ರತಾ ಬಾತ್ರಾ ಅವರು ಈ ಲೇಖನದ ಮೂಲಕ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಶಿಕ್ಷಕರಲ್ಲಿ ಓದುವ ಅಭ್ಯಾಸ ಮೂಡಿಸಿದರೆ ಅವರ ಸಾಮರ್ಥ್ಯ ಹೆಚ್ಚಿಸಬಹುದು ಎಂಬುದನ್ನು ಈ ಲೇಖನದಲ್ಲಿ ನಿರೂಪಿಸಿದ್ದಾರೆ. ಉದಯಪುರದ ವಿದ್ಯಾಭವನದ ಶಿಕ್ಷಣ ಸಂಪನ್ಮೂಲ ಕೇಂದ್ರವು ವಿನ್ಯಾಸಗೊಳಿಸಿದ ಪ್ರಮಾಣ ಪತ್ರ ಆಧಾರಿತ ಕಾರ್ಯಕ್ರಮದ ಪಠ್ಯಗಳ ಆಯ್ಕೆಯ ಹಿಂದಿನ ಮಾನದಂಡಗಳನ್ನು ಈ ಲೇಖನ ಸಾದರಪಡಿಸುತ್ತದೆ. ಶಿಕ್ಷಣ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಪರ್ಯಾಯ ಶಾಲೆಗಳ ಪಾತ್ರ ಮುಖ್ಯವಾದುದು. ಆದುದರಿಂದ ಲೇಖಕರ ಅನುಭವಗಳ ನಿರೂಪಣೆ ಅತಿ ಮುಖ್ಯವಾದುದು.

ಪ್ರಮುಖ ಪದಗಳು: ಅರ್ಥಪೂರ್ಣ ವಿಷಯ ನೀಡಿಕೆ– **comprehensible Input,** ಪಠ್ಯಗಳ ಆಯ್ಕೆ– **selecting text,** ಪ್ರೌಢ ವಯಸ್ಕರಿಗೆ ಪಠ್ಯಗಳ ಆಯ್ಕೆ– **choosing texts for adults,** ಶಿಕ್ಷಕರ ಸಾಮರ್ಥ್ಯವನ್ನು ಒರೆಗೆ ಹಚ್ಚುವ ಪಠ್ಯಗಳು– **texts which challenge current reading abilities of teachers,** ಮಕ್ಕಳು ನಾಯಕರಾಗಿರುವ ಪಠ್ಯ– **texts with children as protagonists,** ಭಾರತೀಯ ಸಂವಿಧಾನ ನೀಡಿದ ಒಟ್ಟಾರೆ ಚಿತ್ರಣ– **picture of society envisaged by Indian Constitution.**

ಪೀಠಿಕೆ

ವಿದ್ಯಾರ್ಥಿಗಳಲ್ಲಿ 'ಓದುವ' ಮತ್ತು ಬರೆಯುವ ಅಭ್ಯಾಸ ಮೊಳೆಯುವಂತೆ ಮಾಡಲು, ಪರಿಣಾಮಕಾರಿ ಓದುಗರನ್ನಾಗಿಸಿ ಓದನ್ನು ಆಸ್ವಾದಿಸುವಂತೆ ಮಾಡಲು ನಮ್ಮಲ್ಲಿ ಹಲವರು ಪ್ರಯಾಸ ಪಡುತ್ತೇವೆ. ಆದರೆ ಬಹಳಷ್ಟು ಶಿಕ್ಷಕರು ನುರಿತ ಓದುಗರಲ್ಲವೆಂದು ಅಥವಾ ಓದುವುದನ್ನು ಇಷ್ಟಪಡದವರೆಂದು ಅವರೊಂದಿಗೆ ಕೆಲಸ ಮಾಡುವವರಿಗೆ ತಿಳಿದುಬರುವ ಸಂಗತಿ. ಶಿಕ್ಷಕರ ಸ್ವತಂತ್ರ ಕಲಿಕೆಗೂ ಮತ್ತು ಉತ್ತಮ ಶಿಕ್ಷಕರಾಗುವ ಸಾಧ್ಯತೆಗೂ ಶಿಕ್ಷಕರಲ್ಲಿ ಓದಲು, ಬರೆಯಲು ಇರುವ ನಿರಾಸಕ್ತಿಯೇ ಅಡ್ಡಗಾಲು ಎಂದರೆ ಅತಿಶಯೋಕ್ತಿಯಲ್ಲ.

ಉದಯಪುರದ 'ವಿದ್ಯಾ ಭವನ್ ಶಿಕ್ಷಣ ಸಂಪನ್ಮೂಲ ಕೇಂದ್ರ'ವು ಉದಯಪುರದ ಗ್ರಾಮೀಣ ಭಾಗಗಳ ಪರ್ಯಾಯ ಶಿಕ್ಷಕರ ಸಾಮರ್ಥ್ಯ ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಶಿಕ್ಷಣ ಕಲೆ, ಮಕ್ಕಳ ಮನೋವಿಜ್ಞಾನ, ಶಿಸ್ತಿಗೆ ಸಂಬಂಧಿಸಿದ ವಿಚಾರಗಳನ್ನು ಕುರಿತು ಶಿಕ್ಷಕರಿಂದಲೇ ಸ್ವಯಂ ಕಲಿಕಾ ಸಾಮಗ್ರಿಗಳನ್ನು ತಯಾರು ಮಾಡಿಸಲಾಗುತ್ತದೆ. ಇದರಲ್ಲಿ ಕಂಡುಕೊಂಡ ಸತ್ಯವೆಂದರೆ ಶಿಕ್ಷಕರಲ್ಲೂ ಓದುವ, ಬರೆಯುವ ಆಸಕ್ತಿ ಮತ್ತು ನೈಪುಣ್ಯ ಹೆಚ್ಚಿಸುವಂತಹ ಸ್ವಯಂ-ಸಿದ್ಧತೆಯ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಉದಯಪುರದಲ್ಲಿ ಒಂದು ಪ್ರಮಾಣ ಪತ್ರ ಆಧಾರಿತ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲಾಯಿತು.

ಪರ್ಯಾಯ ಶಾಲೆಗಳ ಶಿಕ್ಷಕರು

ಪರ್ಯಾಯ ಶಾಲೆಗಳ ಶಿಕ್ಷಕರು ತಾವು ಕಲಿಸುವ ಶಾಲೆಗಳು ಇರುವ ಸ್ಥಳೀಯ ಸಮುದಾಯಕ್ಕೆ ಸೇರಿದವರಾಗಿದ್ದರು. ಅವರಲ್ಲಿ ಬಹಳಷ್ಟು ಮಂದಿ ತಮ್ಮ ಶಾಲಾ ಶಿಕ್ಷಣವನ್ನೂ ಮುಗಿಸಿಲ್ಲ. ಹೆಚ್ಚೆಂದರೆ ಎಂಟರಿಂದ ಹನ್ನೆರಡನೇ ತರಗತಿಯನ್ನು ಪೂರೈಸಿರುತ್ತಾರೆ. ಹಾಗೆಯೇ ಅವರಿಗೆ ಪ್ರತಿದಿನದ ಕೆಲಸಗಳ ನಡುವೆ ನಿರಂತರವಾಗಿ ಓದುವ, ಬರೆಯುವ ಅವಕಾಶ ದೊರೆಯುವುದು ಕಡಮೆ. ಆಗೀಗ ದಿನಪತ್ರಿಕೆ ಓದಿರಬಹುದಾದ ಅನುಭವ ಬಿಟ್ಟರೆ, ಬೇರೆ ಓದಿಗೆ ಅವಕಾಶ ಸಿಕ್ಕಿರುವುದಿಲ್ಲ. ಇವರ ಮಾತೃಭಾಷೆ 'ಮೆವಾರಿ' ಅಥವಾ 'ವಾಗ್ರಿ' ಆಗಿರುತ್ತದೆ ಮತ್ತು ಅವರು ಕಲಿಸುವ ಶಾಲೆಗಳಲ್ಲಿ ಹಿಂದಿ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತದೆ.

ಸರಳವಾಗಿ ಹೇಳುವುದಾದರೆ, ಈ ಶಿಕ್ಷಕರಿಗೆ ಪಠ್ಯಗಳನ್ನು ಅರ್ಥಮಾಡಿಕೊಂಡು ಒಳನೋಟಗಳನ್ನು ಪಡೆಯುವುದಕ್ಕಾಗಿ ನಾವು ಸಹಾಯ ಮಾಡಲು ಇಚ್ಛಿಸಿದೆವು. ಅಂದರೆ ಕೇವಲ ಪಠ್ಯದಲ್ಲಿನ ಮಾಹಿತಿ ನಿರೂಪಿತವಾದ

ಆಗುಹೋಗುಗಳು ಮತ್ತು ಕಲ್ಪನೆಗಳು ಅಲ್ಲದೆ ಪಠ್ಯದಲ್ಲಿ ಅಡಕವಾಗಿರುವ ಅರ್ಥಗಳನ್ನು, ಭಾವಗಳನ್ನು ತಮ್ಮದಾಗಿಸಿಕೊಳ್ಳುವ ಬಗೆಯನ್ನು ಹೇಳಿಕೊಡುವುದು ಮುಖ್ಯವಾಯಿತು. ಹಾಗೆಯೇ ಓದುವ ಕ್ರಿಯೆಗೆ ಸ್ವಂತ ಯೋಚನೆ, ಅಭಿಪ್ರಾಯ–ದೃಷ್ಟಿಕೋನವನ್ನು ಸೇರಿಸುವ ಅಗತ್ಯದ ಬಗೆಗೆ ಅರಿವು ಮೂಡಿಸುವುದರ ಆವಶ್ಯಕತೆಯೂ ಇದೆ. ಇಷ್ಟೆಲ್ಲ ನೆರವೇರಬೇಕೆಂದರೆ ಮೊದಲು ಶಿಕ್ಷಕರು ಹೆಚ್ಚು ಹೆಚ್ಚು ಓದಬೇಕಾದ ಅನಿವಾರ್ಯತೆ ಇದೆ ಎಂಬುದನ್ನು ಮನಗಂಡೆವು.

ಅಂದರೆ ನಮ್ಮ ಕಲಿಕಾ ಕಾರ್ಯಕ್ರಮವು ಈ ಎರಡು ಅಂಶಗಳನ್ನು ಒಳಗೊಳ್ಳಬೇಕು:

- ಶಿಕ್ಷಕರಲ್ಲಿ ಆಸಕ್ತಿ ಹುಟ್ಟಿಸುವಂತೆ ಇರಬೇಕು.
- ಅವರು ನಿರಂತರವಾಗಿ ಓದಿನಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬೇಕು.

ಶಿಕ್ಷಕರನ್ನು ಓದುವ ಆಲೋಚನೆಯಲ್ಲಿ ತೊಡಗಿಸಬಹುದಾದರೂ ಓದುವುದರಲ್ಲಿ ಅವರ ಆಸಕ್ತಿ ಕೆರಳಿಸುವುದು ಕಷ್ಟಕರವಾಗಬಹುದು. ಈ ಕಾರಣಗಳಿಂದಾಗಿ ಸೂಕ್ತ ಪಠ್ಯಗಳ ಆಯ್ಕೆಗೆ ಒತ್ತು ನೀಡಿದೆವು. ಈ ಲೇಖನವು ಪಠ್ಯಗಳ ಆಯ್ಕೆಯ ಹಿಂದಿನ ಪ್ರೇರಣೆಗಳನ್ನು, ಗಣನೆಗೆ ತೆಗೆದುಕೊಂಡ ಅಂಶಗಳನ್ನೂ ಕುರಿತಾಗಿದೆ.

ಪಠ್ಯಗಳ ಆಯ್ಕೆ

ಪಠ್ಯಗಳ ಆಯ್ಕೆಯು ಈ ನಾಲ್ಕು ವಿಷಯಗಳನ್ನು ಆಧರಿಸಿದೆ. ಮೊದಲನೆಯ ಮೂಲಭೂತ ಪ್ರಶ್ನೆಯೆಂದರೆ, ಯಾವ ತೆರನಾದ ಪಠ್ಯಗಳು ಓದುವ ಸಾಮರ್ಥ್ಯವನ್ನು ಹೆಚ್ಚಿಸಬಹುದು? ಎರಡನೆಯದಾಗಿ ಶಿಕ್ಷಕರಿಗೆ ಎಂತಹ ಪಠ್ಯಗಳು ಆಸಕ್ತಿದಾಯಕವಾಗಿರಬಹುದು? ಮೂರನೆಯದು, ಶಿಕ್ಷಕರು ಎಂತಹ 'ಪಠ್ಯಗಳನ್ನು ಓದಬೇಕು?' ಹಾಗೂ ನಾಲ್ಕನೆಯದು, ಯಾವ ತರಹದ ಸಾಮಾಜಿಕ ಚಿತ್ರಣವನ್ನು ಮತ್ತು ಮನುಷ್ಯ ಪ್ರಯತ್ನಗಳನ್ನು ಈ ಪಠ್ಯಗಳು ಬಿಂಬಿಸಬೇಕು ಮತ್ತು ಅವುಗಳ ಒಟ್ಟಾರೆ ದನಿ ಹೇಗಿರಬೇಕು? ಈ ನಾಲ್ಕು ಪ್ರಶ್ನೆಗಳಲ್ಲಿ ಕಡೆಯದು ನಮ್ಮಲ್ಲಿ ಮೂಡಿಸಿದ ಎಚ್ಚರ ಮುಖ್ಯವಾದುದು. ಅದೇನೆಂದರೆ ಪಠ್ಯಗಳ ಆಯ್ಕೆ ಎಂದರೆ ಅದು ನೈತಿಕ ಆಯ್ಕೆಯೇ ಆಗಿರುತ್ತದೆ!

ಮೊದಲಿಗೆ ಕ್ರಾಷೆನ್‌ರ ಅರ್ಥಪೂರ್ಣ ವಿಷಯ ನೀಡಿಕೆ (Comprehensible Input) ಪರಿಕಲ್ಪನೆಯನ್ನು ಆಧರಿಸಿ ಶಿಕ್ಷಕರ ಸಾಮರ್ಥ್ಯವನ್ನು ಒರೆಗೆ ಹಚ್ಚುವಂತಹ ಪಠ್ಯಗಳನ್ನು ಆಯ್ಕೆ ಮಾಡುವುದು ಎಂದಾಯಿತು. ಸಾಮರ್ಥ್ಯ ಹೆಚ್ಚುತ್ತಿದ್ದ ಹಾಗೆಯೇ

ಪಠ್ಯಗಳ ಸಂಕೀರ್ಣತೆಯನ್ನು ಹೆಚ್ಚಿಸಬಹುದು ಎಂಬುದನ್ನೂ ಮನಗಂಡೆವು. ಶಿಕ್ಷಕರ ಸಾಮರ್ಥ್ಯ ಹೆಚ್ಚಿಸಬಲ್ಲ ಪಠ್ಯಗಳು ಸಾಮಾನ್ಯವಾಗಿ ಈ ಕೆಳಗಿನ ಅಂಶಗಳನ್ನು ಒಳಗೊಂಡಿವೆ:

ದೀರ್ಘ ಪಠ್ಯಗಳು:

ದೀರ್ಘ ಪಠ್ಯಗಳೆಂದರೆ ಸಾಮಾನ್ಯವಾಗಿ ೧೫೦೦–೪೦೦೦ ಪದಗಳನ್ನು ಹೊಂದಿರುತ್ತವೆ, ಹಾಗೆಯೇ ಒಂದು ವಾಕ್ಯದಲ್ಲಿ ಪದಗಳ ಸಂಖ್ಯೆಯೂ ಹೆಚ್ಚು. (ಕಿರುಪಠ್ಯಗಳಿಗೆ ಹೋಲಿಸಿದಾಗ)

ವಿಭಿನ್ನ ಬರಹ ಪ್ರಕಾರಗಳು

ಕಥೆಗಳು, ಕವನಗಳು, ನಾಟಕಗಳು, ಪ್ರಬಂಧಗಳು, ಪತ್ರಗಳು, ಭಿತ್ತಿ ಪತ್ರಗಳು, ಜಾಹೀರಾತುಗಳು... ಹೀಗೆ ವಿಭಿನ್ನ ಪ್ರಕಾರಗಳು ಪಠ್ಯಗಳ ಸಂಕೀರ್ಣತೆಯನ್ನು ಹೆಚ್ಚಿಸಲು ಸಹಕಾರಿಯಾದವು. ಅಂತೆಯೇ ನಿರೂಪಣಾ ಶೈಲಿಯ ವೈವಿಧ್ಯವೂ ಮುಖ್ಯವಾಗುತ್ತದೆ. ಇದರಲ್ಲಿ ವಿವರಣಾತ್ಮಕ, ವಿಶ್ಲೇಷಣಾತ್ಮಕ, ಪ್ರತಿಪಾದನಾ ಶೈಲಿಯ ಬರಹಗಳನ್ನು ಒಳಗೊಂಡ ವಾಚಿಕೆಗಳನ್ನು ಪರಿಚಯಿಸಲಾಯಿತು. ಇದಕ್ಕಾಗಿ ಪ್ರೇಮಚಂದ್, ರವೀಂದ್ರನಾಥ ಟಾಗೋರ್, ಅಮೃತಾ ಪ್ರೀತಂ, ಮಹಾಶ್ವೇತಾದೇವಿ, ಭೀಷ್ಮ ಸಾಹ್ನಿ, ರಾಜೇಂದ್ರ ಯಾದವ್, ಫಣೀಶ್ವರನಾಥ್ ರೇಣು ಮೊದಲಾದ ವಿಶಿಷ್ಟ ಲೇಖಕರ ಬರಹಗಳನ್ನು ಪರಿಗಣಿಸಬೇಕಾಯಿತು. ಇವರುಗಳ ಭಿನ್ನ ಶೈಲಿಯ ನಿರೂಪಣೆ ಮತ್ತು ವಿವರಣೆ ಓದುಗರ ಸಾಮರ್ಥ್ಯವನ್ನು ಪರೀಕ್ಷಿಸಿ ಆಸಕ್ತಿ ಕೆರಳಿಸಿತು. ಮೇಲೆ ಹೆಸರಿಸಿದ ಲೇಖಕರ ಪಠ್ಯಗಳು ಮತ್ತು ಬರಹಗಳು ಎಂದು ವರ್ಗೀಕರಿಸಲಾಗದ ಬರಹಗಳು ಹೆಚ್ಚಿನ ಸವಾಲು ಒಡ್ಡಿದವು.

ಓದುಗರಲ್ಲಿ ಆಸಕ್ತಿ ಕೆರಳಿಸುವ ಬಗೆ

ಓದುಗರ ಸುತ್ತಲ ಸಂದರ್ಭ ಅಥವಾ ಸನ್ನಿವೇಶವನ್ನು ಕೇಂದ್ರೀಕರಿಸಿದ ಬರಹವು ಓದುಗರ ಆಸಕ್ತಿ ಕೆರಳಿಸಬಲ್ಲುದು ಎಂದು ಕೇಳಿ ತಿಳಿದಿದ್ದೆವು, ಮೊದಲಿಗೆ ಸನ್ನಿವೇಶವೆಂದರೆ ವಾಸವಿರುವ ಭೌಗೋಳಿಕ ಪರಿಸರ, ಹಸಿರು–ಕಾನನ, ಮತ್ತು ಅವರ ಜೀವನ ಶೈಲಿಯೇ ಎಂದು ಗ್ರಹಿಸಿದೆವು. ಓದುಗರ ಸನ್ನಿವೇಶದ ಸೂಕ್ಷ್ಮ ಚಿತ್ರಣ ಅವರ ಆಸಕ್ತಿ ಕೆರಳಿಸಬಹುದು ಎಂದು ಭಾವಿಸಿದೆವು. ಆದರೆ ಅವರ 'ಪರಿಸರ'ವಷ್ಟೇ ಅವರ ಆಸಕ್ತಿಗಳ ಗಡಿಗಳನ್ನು ನಿರ್ಧರಿಸಲಾಗದು. ಓದುಗರಾಗಿ

ನಮಗೂ ನಮ್ಮ ಪರಿಸರದಲ್ಲಿ ಕಟ್ಟಿದ ಕೆಲವು ಕತೆಗಳು ರುಚಿಸದೆ ಹೋಗಬಹುದು. ಅಂತೆಯೇ ಅನ್ಯ ಸಂಸ್ಕೃತಿಯ ಕಥಾನಕಗಳು ಆಸಕ್ತಿಕರ ಅನಿಸಿಬಿಡಬಹುದು. ಉದಾಹರಣೆಗೆ, ನಮ್ಮ ಶಿಕ್ಷಕರಿಗೆ ಅನ್ಯ ಸಂಸ್ಕೃತಿಯ ಆಚರಣೆಗಳನ್ನು ಕುರಿತಾದ ಬರಹ ಆಸಕ್ತಿಕರ ಅನಿಸಿ, ವ್ಯವಸಾಯ ಕುರಿತಾದ ಬರಹಗಳು ನೀರಸ ಎನಿಸಿತು. ಹೀಗಾಗಿ ಒಂದು ಪಠ್ಯಕ್ಕೆ ಆಸಕ್ತ ಪರಿಸರ/ಸನ್ನಿವೇಶ ನಿರ್ಮಿಸುವುದು ಕಷ್ಟಕರವಲ್ಲ ಎಂದು ಅರ್ಥವಾಯಿತು. ಜಗತ್ತಿನ ಬಗ್ಗೆ ನಮಗೆ ಗೊತ್ತಿರುವ ವಿಷಯಗಳನ್ನು ಬಳಸಿಕೊಳ್ಳುವ ಸಾಮರ್ಥ್ಯದಿಂದ ನಮಗೆ ಗೊತ್ತಿರದ ಅಮೂರ್ತ ವಿಷಯಗಳನ್ನು ತಿಳಿಯಲು ಈ ಪ್ರಕ್ರಿಯೆ ನೆರವಾಗುತ್ತದೆ.

ಸನ್ನಿವೇಶವನ್ನು ಕುರಿತು

ಆರಂಭದಲ್ಲಿ ಸನ್ನಿವೇಶವನ್ನು ಅರ್ಥವನ್ನು ನಾವು ಪೂರ್ಣ ಪ್ರಮಾಣದಲ್ಲಿ ಅರ್ಥೈಸಿಕೊಳ್ಳಲಿಲ್ಲವೇನೋ ಅನಿಸಿತು. ಸಂದರ್ಭ ಅಥವಾ ಸನ್ನಿವೇಶವೆಂದರೆ ಒಟ್ಟು ಮಾನವ ಕುಲದ ಭಾವನೆಗಳು, ಮೌಲ್ಯಗಳ ಅನುಭವ ಪ್ರಪಂಚವೂ ಸೇರಿರುತ್ತದೆ. ಆದುದರಿಂದ ಪರಿಸರ ಎಂಬುದು ಸಾರ್ವತ್ರಿಕ ಮತ್ತು ಅದಕ್ಕೆ ಭೌಗೋಳಿಕ ಗಡಿಗಳು ಇರುವುದಿಲ್ಲ; ಮಗುವಿನೆಡೆಗಿರುವ ತಂದೆ–ತಾಯಿ ಪ್ರೀತಿ, ಇಬ್ಬರ ಪ್ರೇಮ ಸಲ್ಲಾಪ, ಮನುಷ್ಯರಲ್ಲಿ ಅಂತರ್ಗತವಾಗಿರುವ ಸ್ವಾತಂತ್ರ್ಯದ ಬಯಕೆ, ಇದಕ್ಕೆ ಒಪ್ಪುವ ಉದಾಹರಣೆಗಳು. ಹೀಗಾಗಿ ಸಾಹಿತ್ಯ ಇಂತಹ ಸಾರ್ವತ್ರಿಕ ಪರಿಸರವನ್ನು ನಿರ್ಮಿಸಬಲ್ಲ ಶಕ್ತಿಯುಳ್ಳ ಮಾಧ್ಯಮವಾಗಿದೆ ಎಂಬುದನ್ನು ಮನಗಂಡೆವು. ಇದಕ್ಕೆ ಗ್ರಾಮ್ಯ ಪರಿಸರವೇ ಆಗಬೇಕೆಂಬ ನಿಯಮವಿಲ್ಲ. ಯಾವ ಪಠ್ಯವು ಬದುಕಿನ ನೋವು–ನಲಿವು, ಜಯ–ಅಪಜಯಗಳ ಬಗೆಗೆ ಮಾತನಾಡುತ್ತದೋ, ಅದು ಶಿಕ್ಷಕರ ಆಸಕ್ತಿಯನ್ನು ಸೆರೆ ಹಿಡಿಯಬಲ್ಲದು.

ನಾವು ಆಯ್ಕೆ ಮಾಡಿದ ಪಠ್ಯಗಳು ಒಮ್ಮೊಮ್ಮೆ ಓದುಗರನ್ನು ದೂರದ ಲೋಕಕ್ಕೆ, ಯಾವುದೋ ಕಾಲಕ್ಕೆ ಕೊಂಡೊಯ್ಯುತಿದ್ದವು. ತಮ್ಮಂತೆಯೇ ಇರುವ ಅನ್ಯ ಸಂಸ್ಕೃತಿಯ ಜನರ ಬದುಕಿನ ದರ್ಶನ ಮಾಡಿಸುತ್ತಿದ್ದವು. ಈ ಪಠ್ಯಗಳು ಒಮ್ಮೊಮ್ಮೆ ಕನ್ನಡಿಯಾಗಿ ತಮ್ಮ ಬಿಂಬವನ್ನೇ ಪ್ರತಿಫಲಿಸಿ, ಇನ್ನೊಮ್ಮೆ ಕಿಟಕಿಯಾಗಿ ಪ್ರಪಂಚವನ್ನು ತೋರುತ್ತಿದ್ದವು.

ಓದುಗರ ಆಸಕ್ತಿ ಗುರುತಿಸುವಾಗ ಮತ್ತಷ್ಟು ಪ್ರಶ್ನೆಗಳು ಎದುರಾದವು, ಬಹುಳಷ್ಟು ಶಿಕ್ಷಕರು ಕಿರಿಯ ವಯಸ್ಸಿನ ಪುರುಷರಾಗಿದ್ದರು. ಇವರಿಗೆ ಸ್ವಲ್ಪ ಪ್ರಮಾಣದ 'ಸಾಹಸ' ಬಲು ಇಷ್ಟ. ತಮ್ಮ ಮನ ಮೆಚ್ಚಿದ ಸಿನೆಮಾಗಳ ಸಾಹಸ ದೃಶ್ಯವನ್ನು ಉದ್ಧರಿಸುತ್ತಿದರು. ಮಿಥುನ್ ಚಕ್ರವರ್ತಿ, ಗೋವಿಂದ ಮತ್ತು ಆಡು ಭಾಷೆಯ

ಕೆಲವು 'ಪ್ರಯೋಗಗಳು' ಇವರ ಪದಕೋಶದಲ್ಲಿ ದಾಖಲಾಗಿದ್ದುವು. ನಮ್ಮ ಕಾರ್ಯಕ್ರಮವು ಇಂತಹ 'ಸಂಸ್ಕೃತಿ ಹೀನ' ಎಂದೇ ಕರೆಯಲ್ಪಡುವ ಅನುಭವಗಳಿಗೆ ಜಾಗ ನೀಡುವುದೇ? ಓದುಗರನ್ನು ಸರಸ– ಸಲ್ಲಾಪದ ನವಿರು ವಿಷಯಗಳು ಆಕರ್ಷಿಸವೇ?

ಹೀಗಾಗಿ ಸಾಹಿತ್ಯವೆಂಬ ತೆಳು ಎಳೆಯನ್ನು ಬಳಸಿ ಓದುಗರ ವಿಚಾರಗಳು, ಆಸಕ್ತಿಗಳು, ಮತ್ತು ಅನುಭವಗಳ ಲೋಕ ಕಟ್ಟುವ ಪಠ್ಯಗಳನ್ನು ಆಯ್ಕೆ ಮಾಡಿಕೊಂಡೆವು. ಫಣೀಶ್ವರನಾಥ್ ರೇಣುರ 'ಪಾಂಚ್ ಲೈಟ್'ನಲ್ಲಿಯ 'ಮುನರಿ' ಮತ್ತು 'ಗೋದಾನ್'ದ ಪ್ರೇಮ ಸಲ್ಲಾಪ, ಭಗವತಿ ಚರಣ್ ವರ್ಮರ 'ಪ್ರಾಯಶ್ಚಿತ್'ನ ಕಬ್ರಿ ಬಿಲ್ಲಿಯನ್ನು ಕೊಲ್ಲುವ ಸುತ್ತ ಆವರಿಸಿರುವ ಮೂಢನಂಬಿಕೆ ಮತ್ತು ವಿಚಿತ್ರ ಆಚರಣೆಗಳು, ಹರಿಶಂಕರ್ ಪರ್ಸಾಯಿಯ 'ವಿಕಲಾಂಗ್ ರಾಜನೀತಿ'ಯ ರಾಜಕೀಯ ಕಥಾನಕ... ಇವೆಲ್ಲವೂ ಶಿಕ್ಷಕರ ವಯೋಮಾನದ ಭಾವನೆ ಮತ್ತು ಆಶೋತ್ತರಗಳಿಗೆ ಸ್ಪಂದಿಸಿದವು.

ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ ಶಿಕ್ಷಕರಲ್ಲಿ ಕಥೆಗಳು ಬೇರೆ ಪ್ರಕಾರಗಳಿಗಿಂತ ಅತಿಹೆಚ್ಚು ಆಸಕ್ತಿ ಉಂಟುಮಾಡಿದವು. ಇದು ಬಹುಶಃ ನಾವು ನೀಡಿದ ಅಧಿಕ ಸಂಖ್ಯೆಯ ಕತೆಗಳ ಕಾರಣದಿಂದಲೂ ಇದ್ದಿರಬಹುದು. ಕೊನೆಯದಾಗಿ ಲೇಖಕರು ಬಳಸುವ 'ಹಿಂದಿ' ಭಾಷೆಗೂ ಶಿಕ್ಷಕರ ದಿನಬಳಕೆಯ ಭಾಷೆಗೂ ಸಾಮ್ಯತೆ ಇರುವಂತಹ ಪಠ್ಯಗಳನ್ನು ಆಯ್ಕೆ ಮಾಡಿದೆವು.

ಶಿಕ್ಷಕರು ಓದಬೇಕಾದ ಮತ್ತು ಓದಲೇಬೇಕಾದ ಪಠ್ಯ

ಕೆಲವು ಪಠ್ಯಗಳನ್ನು ಶಿಕ್ಷಕರು ಓದಲೇಬೇಕಾಗುತ್ತದೆ. ಈ ಕಾರ್ಯಕ್ರಮವು ಸಮುದಾಯದ ಅಭಿವೃದ್ಧಿ ಕಾರ್ಯಕರ್ತರೂ ಆಗಿರುವ ಶಿಕ್ಷಕರಿಗಾಗಿ ರೂಪಗೊಂಡಿರುವುದರಿಂದ ಶಿಕ್ಷಣ, ಸಾಮಾಜಿಕ ಬದಲಾವಣೆ, ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ಪಾಂಡಿತ್ಯಪೂರ್ಣ ಪಠ್ಯಗಳನ್ನೂ ಓದಬೇಕಲ್ಲವೇ? ಅಂತೆಯೇ ಮಕ್ಕಳ ದೃಷ್ಟಿಕೋನ, ಅನುಭವ ಮತ್ತು ಭಾವನೆಗಳಿಗೂ ಪಠ್ಯದಲ್ಲಿ ವಿಶೇಷ ಸ್ಥಾನ ಇರಬೇಡವೇ?

ಹೀಗಾಗಿ ಓದುಗರಾದ ಶಿಕ್ಷಕರು 'ಮಕ್ಕಳು' ನಾಯಕರಾಗಿರುವ ಪಠ್ಯಗಳನ್ನು ಓದುವ ಅಗತ್ಯವಿದೆ. ನಾವು ಆಯ್ಕೆ ಮಾಡಿದ ಕೆಲವು ಪಠ್ಯಗಳು ಸಮುದಾಯದ ಒಂದು ಭಾಗದ ಮಕ್ಕಳ ಹೋರಾಟ ಮತ್ತು ಯೋಚನೆಗಳನ್ನು ಪ್ರತಿನಿಧಿಸಿದವು. ಅಷ್ಟೇ ಅಲ್ಲದೆ ಮಕ್ಕಳ ಮುಗ್ಧತೆ ಅವರನ್ನು ಯೋಚಿಸಬಲ್ಲ ವ್ಯಕ್ತಿಗಳಾಗಿ ಪರಿಗಣಿಸಲು ಅಡ್ಡಿ ಉಂಟುಮಾಡಲಿಲ್ಲ. ಮಹಾಶ್ವೇತಾದೇವಿಯ 'ಕ್ಯೂಂ ಕ್ಯೂಂ ಚೋರಿ', ಭೀಷ್ಮ

ಸಾಹ್ನಿಯ 'ಫುಲೇಬಾಜ್ ಲರ್ಖಿ', ಜೈಶಂಕರ್ ಪ್ರಸಾದ್‌ರ 'ಚೋಟಾ ಜಾದುಗಾರ್', ರಾಜೇಂದ್ರ ಯಾದವ್‌ರ 'ಭಾಯ್' ಇದಕ್ಕೆ ಪೂರಕ ಉದಾಹರಣೆಗಳು.

ಕಾರ್ಯಕ್ರಮದಲ್ಲಿ 'ಮಕ್ಕಳ ಕಲಿಕಾ ಪ್ರಕ್ರಿಯೆಗಳು' ಎಂಬ ಪ್ರತ್ಯೇಕ ವಿಷಯವೇ ಇದ್ದುದರಿಂದ ಶಿಕ್ಷಣವನ್ನು ಕುರಿತಾದ ಬೇರೆ ಪಾಂಡಿತ್ಯಪೂರ್ಣ ಪಠ್ಯಗಳನ್ನು ಪರಿಚಯಿಸುವ ಪ್ರಯತ್ನ ಮಾಡಲಿಲ್ಲ. ಆದಾಗ್ಯೂ, ನೆಹರು, ಗಾಂಧಿಯವರ ಅಭಿವೃದ್ಧಿಗೆ ಸಂಬಂಧಿಸಿದ ಒಳನೋಟಗಳನ್ನು ಶಿಕ್ಷಕರಿಗೆ ಪರಿಚಯಿಸಿದೆವು. ಈ ದಿಸೆಯಲ್ಲಿ ಸಾಕಷ್ಟು ಪಠ್ಯಗಳನ್ನು ಸೇರಿಸಿಲ್ಲದ ಕಾರಣ ನಾವು ಅಷ್ಟೇನೂ ಯಶಸ್ವಿಯಾಗಲಿಲ್ಲ ಎಂಬುದನ್ನು ಒಪ್ಪಬೇಕಾದದ್ದೆ.

ನಾಲ್ಕನೇ ಮತ್ತು ಕಟ್ಟಕಡೆಯ ಪ್ರಶ್ನೆಯು ನೈತಿಕ ಚೌಕಟ್ಟಿಗೆ ಸಂಬಂಧಿಸಿದುದಾಗಿದೆ. ಭಾರತೀಯ ಸಂವಿಧಾನವು ನೀಡಿದ ಸಮಾಜದ ಒಟ್ಟಾರೆ ಚಿತ್ರಣ ನಮ್ಮ ಚೌಕಟ್ಟನ್ನು ನಿರ್ದೇಶಿಸಬೇಕೆಂದು ತೀರ್ಮಾನಿಸಲಾಯಿತು. ಸಂವಿಧಾನದ ಕೇಂದ್ರ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ನ್ಯಾಯ ನಮಗೆ ಸ್ಪಷ್ಟ ದೃಷ್ಟಿಕೋನವನ್ನು ಒದಗಿಸಿತು. ನಾವು ಆಯ್ಕೆ ಮಾಡುವ ಪಠ್ಯಗಳು ಸಾಮಾಜಿಕ ವಾಸ್ತವಗಳನ್ನು, ಮನೆ–ಸಮುದಾಯಗಳನ್ನು ಮತ್ತು ಪ್ರಪಂಚವನ್ನು ಪರಿಚಯಿಸಬೇಕೇ ವಿನಾ ಹೀಗೆ ಬದುಕಬೇಕು ಎಂದು ಬೋಧನೆ ಮಾಡುವ ತೆರನಾದವು ಆಗಿರಬಾರದು ಎಂಬುದು ನಮಗೆ ಸ್ಪಷ್ಟವಾಗಿತ್ತು. ನಾವು ಆಯ್ಕೆ ಮಾಡಿದ ಹಲವಾರು ಪಠ್ಯಗಳು ಶೋಷಣೆ, ಅಸಮಾನತೆಯ ಅಧಿಕಾರ ಸಂಬಂಧಗಳು–ಉದಾಹರಣೆಗೆ ನೌಕರ–ಮೇಲಧಿಕಾರಿ, ಗಂಡು–ಹೆಣ್ಣು, ಮಗು–ವಯಸ್ಕ, ಬಡವ–ಶ್ರೀಮಂತ, ಮೇಲ್ಜಾತಿ–ಕೆಳಜಾತಿ ಇತರೆ ವಿಷಯಗಳ ಮೇಲಿದ್ದವು. ಈ ಪಠ್ಯಗಳು ಹೆಣ್ಣು ಮತ್ತು ಗಂಡನ್ನು ತಪ್ಪು ಒಪ್ಪುಗಳನ್ನು ಮಾಡಬಲ್ಲ ಸಮಾನರಂತೆ ಚಿತ್ರಿಸುತ್ತವೆ. ಅಲ್ಲದೆ ಮಾನವ ಮತ್ತು ಪರಿಸರದ ನಡುವಿನ ಸಂಬಂಧವನ್ನು ಪರಿಶೋಧಿಸುತ್ತವೆ. ಒಟ್ಟಾರೆಯಾಗಿ ಓದುಗರಿಗೆ ತಮ್ಮ ವಿಚಾರ ಮತ್ತು ನೆಲೆಗಳನ್ನು ಗುರುತಿಸಿಕೊಳ್ಳಲು ಅವಕಾಶ ನೀಡುತ್ತವೆ.

ಕೊನೆಯ ಮಾತು

ಈ ಪ್ರಕ್ರಿಯೆಯು ಪ್ರೌಢವಯಸ್ಕರಿಗೆ ಪಠ್ಯಗಳನ್ನು ಆಯ್ಕೆ ಮಾಡುವ ಕಡೆ ಗಮನ ಹರಿಸುವ ಜೊತೆಗೆ ಮಕ್ಕಳ ಪಠ್ಯಗಳ ಆಯ್ಕೆಯ ಬಗೆಗೂ ಚಿಂತಿಸುವ ಅಗತ್ಯವನ್ನು ಮನದಟ್ಟು ಮಾಡಿಸಿತು. ಹಾಗೆ ನೋಡಿದರೆ ಈ ಪ್ರಕ್ರಿಯೆಯಿಂದಾಗಿ ಮಕ್ಕಳ ಪಠ್ಯದ ಮಾನದಂಡದ ಪಟ್ಟಿಯಲ್ಲಿ ಸೇರಿಸಬೇಕಾದ ಅಂಶಗಳ ಬಗ್ಗೆ ಸ್ಪಷ್ಟತೆ

ದೊರಕುತ್ತದೆ. ಅಲ್ಲದೆ ಇಲ್ಲಿ ಪ್ರಸ್ತಾವಿಸಲಾದ ಯಾವೊಂದು ಅಂಶವನ್ನೂ ಸಹ ಕಡೆಗಣಿಸುವುದು ಬಹುಶಃ ಸಾಧ್ಯವಿಲ್ಲ.

* * *

ಪರಾಮರ್ಶನೆಗಳು

1. Krashen S (1982). Principles and practice in second language acquisition. Oxford: Pergamon Press Inc.
2. Vidya Bhawan Education Resource Centre, 2003-2006. Certification course for teachers of alternative schools. Udaipur: Vidya Bhawan Society.

ಚಿಂತನಾತ್ಮಕ ಪ್ರಶ್ನೆಗಳು:

೧. ನುರಿತ ಶಿಕ್ಷಕರ ಅಭಾವವನ್ನು ಸರಿದೂಗಿಸುವ ಬಗೆ ಏನು?

೨. ಓದುವ ಸಾಮರ್ಥ್ಯವು ಕಲಿಸುವ ಸಾಮರ್ಥ್ಯವನ್ನು ಹೆಚ್ಚಿಸಬಲ್ಲದೇ? ವಿವರಿಸಿ.

೩. ಶಿಕ್ಷಕರಿಗಾಗಿ ಪಠ್ಯಗಳ ಆಯ್ಕೆಯನ್ನು ನಿರ್ಧರಿಸಬೇಕಾದ ಅಂಶಗಳಾವುವು? ಅವುಗಳಲ್ಲಿ ಯಾವುದು ಬಹುಮುಖ್ಯ ಎಂದು ನಿಮಗನ್ನಿಸುತ್ತದೆ?

೪. ಮಕ್ಕಳ ಪಠ್ಯಗಳ ಆಯ್ಕೆಯ ಮಾನದಂಡ ಹೇಗಿರಬೇಕು?

ನಮ್ರತಾ ಬಾತ್ರಾ: ಇವರು ವಿದ್ಯಾ ಭವನ್ ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿ ಸುಮಾರು ಹತ್ತು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಕ್ಕಳಿಗೆ ಕಲಿಕಾ ಸಾಮಗ್ರಿಗಳನ್ನು ತಯಾರು ಮಾಡುವುದು ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಸಂಶೋಧನೆ ಇವರ ವಿಶೇಷ ಆಸಕ್ತಿ ಕ್ಷೇತ್ರಗಳು. namrita.batra@gmail.com

ಅನುವಾದ: ವೀಣಾದೇವಿ ಆರ್ ಎಸ್/ **ಪರಿಶೀಲನೆ:** ರಾಜಗೋಪಾಲ್

ಮೂಲ: *Language and Language Teaching,* Volume 1 Number 2 July 2012.

❑